25

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಗೋವಿಂದ ರಾಜು ರವರು ನಿಯಮ 72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:

**ಸೂಚನೆ:-** ರಾಜ್ಯದಲ್ಲಿ ಯಾವುದೇ ಪ್ರಮುಖವಾದಂತಹ ಅಪರಾಧ ಪ್ರಕರಣಗಳು ನಡೆದಾಗ ಸರ್ಕಾರ ಅದರ ತನಿಖೆ ಹೊಣೆಯನ್ನು ಅಪರಾಧ ತನಿಖಾ ಇಲಾಖೆಗೆ (ಸಿ.ಐ.ಡಿ) ವಹಿಸುತ್ತದೆ. ಇಂತಹ ಸಮರ್ಥ ಸಂಸ್ಥೆಗೆ ಸಿಬ್ಬಂದಿ ಕೊರತೆ ಕಾಡುತ್ತಿದ್ದು, ಇದರಿಂದ ಪ್ರಕರಣಗಳ ತನಿಖೆ ವಿಳಂಬವಾಗುತ್ತಿದೆ. 866 ಹುದ್ದೆ ಮಂಜೂರು ಮಾಡಲಾಗಿರುವ ಸಂಸ್ಥೆಯಲ್ಲಿ ಪ್ರಸ್ತುತ 646 ಮಂದಿ ಕಾರ್ಯನಿರ್ವಹಿಸುತ್ತಿದ್ದು, 233 ಅಧಿಕಾರಿ, ಸಿಬ್ಬಂದಿ ಹುದ್ದೆ ಖಾಲಿ ಇದೆ. ಎ.ಡಿ.ಜಿ.ಪಿ, ಡಿ.ಐ.ಜಿ.ಪಿ ಮತ್ತು ಎಸ್.ಪಿ ಅಂತಹ ಹುದ್ದೆಗಳಂತಹ ಮಹತ್ವದ ಸ್ಥಾನಗಳು ಖಾಲಿ ಇದೆ. ಯಾವುದೇ ಪ್ರಕರಣವನ್ನು ತಾರ್ತಿಕ ಅಂತ್ಯಕ್ಕೆ ಕಾಣಬೇಕೆಂದರೆ ಸಿ.ಐ.ಡಿಗೆ ಮಾನವ ಸಂಪನ್ಮೂಲ ಬಹಳ ಮುಖ್ಯವಾಗಿ ಬೇಕಾಗುತ್ತದೆ. ಇದರಿಂದ ಉಳಿದ ಸಿಬ್ಬಂದಿ ಮೇಲಿನ ಕೆಲಸದೊತ್ತಡವೂ ಕಡಿಮೆಯಾಗುತ್ತದೆ. ಜತೆಗೆ ತನಿಖೆಯ ಗುಣಮಟ್ಟವೂ ಹೆಚ್ಚಾಗುತ್ತದೆ. ಆದರೆ ಇದೆಲ್ಲ ಆಶಯಗಳು ಸಾಕಾರವಾಗಲು ಸರ್ಕಾರವೇ ಸಹಕಾರ ನೀಡುತ್ತಿಲ್ಲ ಎಂಬುದು ತಜ್ಞರ ಅನಿಸಿಕೆಯಾಗಿದೆ.

**ಉತ್ತರ:-** ಸಿ.ಐ.ಡಿ ಕಛೇರಿಗೆ ಬಹು ಮುಖ್ಯ ಪ್ರಕರಣಗಳು ಮತ್ತು ಕ್ಲಿಷ್ಟಕರ ಪ್ರಕರಣಗಳು ಸರ್ಕಾರ, ಉಚ್ಚ ನ್ಯಾಯಲಯ, ಸರ್ವೋಚ್ಚ ನ್ಯಾಯಾಲಯ ಮತ್ತು ಡಿ.ಜಿ ಮತ್ತು ಐ.ಜಿ.ಪಿ ರವರಿಂದ ವರ್ಗವಾಗುತ್ತಿರುತ್ತದೆ. ಇವುಗಳನ್ನು ಸರಿಯಾದ ಸಮಯದಲ್ಲಿ ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವ ಕಾರ್ಯವನ್ನು ಸಿ.ಐ.ಡಿ ಘಟಕದಲ್ಲಿ ತನಿಖಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪಿ.ಐ, ಡಿ.ಐ ಮತ್ತು ಡಿ.ಎಸ್.ಪಿ ವೃಂದದ ಅಧಿಕಾರಿಗಳು ನಿರ್ವಹಿಸುತ್ತಿರುತ್ತಾರೆ.

- ಡಿಐಜಿಪಿ ಹುದ್ದೆಯ ಅಧಿಕಾರಿಗಳು ತನಿಖಾ ಅಧಿಕಾರಿಗಳಿಗೆ ತನಿಖೆಯಲ್ಲಿ ಮಾರ್ಗದರ್ಶನ ನೀಡುತ್ತಾರೆ ಮತ್ತು ಪ್ರಕರಣಗಳ ತ್ವರಿತ ಮತ್ತು ಸಕಾಲಿಕ ವಿಲೇವಾರಿಯನ್ನು ಖಚಿತಪಡಿಸಿಕೊಳ್ಳುತ್ತಾರೆ. ಪೊಲೀಸ್ ವರಿಷ್ಠಾಧಿಕಾರಿಯು ತನ್ನ ವಿಭಾಗದ ಸರಿಯಾದ ಮತ್ತು ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಜವಾಬ್ದಾರರಾಗಿರುತ್ತಾರೆ ಮತ್ತು ತನಿಖೆಯ ಪ್ರಗತಿಯನ್ನು ವೈಯಕ್ತಿಕವಾಗಿ ಮೇಲ್ವಿಚಾರಣೆ ಮಾಡುತ್ತಾರೆ. ತನಿಖೆಗೆ ಮಾರ್ಗದರ್ಶನ ನೀಡುತ್ತಾರೆ ಮತ್ತು ಎಲ್ಲಾ ನಿಗದಿತ ವರದಿಗಳನ್ನು ತಮ್ಮ ಮೇಲಾಧಿಕಾರಿಗಳಿಗೆ ಸಲ್ಲಿಸುತ್ತಾರೆ. ಅವರು ಅಪರಾಧಗಳು ಸಂಭವಿಸುವ ಸ್ಥಳಗಳಿಗೆ ಭೇಟಿ ನೀಡುತ್ತಾರೆ, ತನಿಖೆಗೆ ಮಾರ್ಗದರ್ಶನ ನೀಡುತ್ತಾರೆ ಹಾಗೂ ಪ್ರಮುಖ ಪ್ರಕರಣಗಳನ್ನು ವೈಯಕ್ತಿಕವಾಗಿ ತನಿಖೆ ಮಾಡುತ್ತಾರೆ.

- ಸಿ.ಐ.ಡಿ ಘಟಕದಲ್ಲಿನ ಪಿ.ಐ, ಡಿ.ಐ ಮತ್ತು ಡಿ.ಎಸ್.ಪಿ ವೃಂದದ ಅಧಿಕಾರಿಗಳು ತನಿಖಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಇವರ ಸಂಖ್ಯಾಬಲ ಮಂಜೂರಾತಿ ಬಲಕ್ಕೆ ಸಮನಾಂತರವಾಗಿರುತ್ತದೆ. ಆದುದರಿಂದ, ಪ್ರಕರಣಗಳ ತನಿಖೆಯಲ್ಲಿ ವಿಳಂಬವಾಗುತ್ತಿಲ್ಲ. ಅವಕಾಶಕೊಡುತ್ತಿಲ್ಲ. ಅಲ್ಲದೆ, ತನಿಖಾ ಅಧಿಕಾರಿಗಳಿಗೆ ತನಿಖಾ ಸಹಾಯಕರಾಗಿ ಪಿ.ಎಸ್.ಐ, ಹೆಚ್.ಸಿ ಮತ್ತು ಪಿ.ಸಿ ರವರುಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ ಇರುವಂತಹ ಪ್ರಕರಣಗಳ ತನಿಖೆಗಳಲ್ಲಿ ತನಿಖಾ ವಿಷಯದಲ್ಲಿ ನುರಿತವರಾಗಿರುತ್ತಾರೆ.

ಸಿ.ಐ.ಡಿ ಘಟಕದ (ಅರಣ್ಯ ಸಂಚಾರ ದಳ ಒಳಗೊಂಡಂತೆ) ಪ್ರಸ್ತುತ ಬಲಾಬಲದ ಮಾಹಿತಿ ಕೆಳಕಂಡಂತಿದೆ.

| ಕ್ರ. ಸಂ | ಹುದ್ದೆ | ಮಂಜೂರಾತಿ ಬಲ | ಹಾಲಿ ಬಲ | ಖಾಲಿ ಹುದ್ದೆ |
|---|---|---|---|---|
| **ಕಾರ್ಯನಿರ್ವಾಹಕ ಸಿಬ್ಬಂದಿ** | | | | |
| 01 | ಡಿಜಿಪಿ | 01 | 0 | 01 (ಪ್ರಸ್ತುತ ಡಿಜಿ & ಐಜಿಪಿ ರವರು ಸಮಕಾಲೀನ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ) |
| 02 | ಎಡಿಜಿಪಿ | 00 | 01 | • 01- ಐಜಿಪಿ ಹುದ್ದೆಯನ್ನು ಎಡಿಜಿಪಿ ಹುದ್ದೆಗೆ ಮೇಲ್ದರ್ಜೆಗೇರಿಸಲಾಗಿದೆ. |
| 03 | ಐಜಿಪಿ | 2 | 01 | 01 |
| 04 | ಡಿಐಜಿಪಿ | 2 | 01 | 01<br>• 01-ಡಿಐಜಿಪಿ ಹುದ್ದೆಯನ್ನು ಐಜಿಪಿಯಾಗಿ ನಿರ್ವಹಿಸಲಾಗಿದೆ. |
| 05 | ಎಸ್‌ಪಿ | 12 | 10 | 2 |
| 06 | ಡಿಎಸ್‌ಪಿ (ಸಿವಿಲ್) | 58 | 43 | 13 |
| 07 | ಡಿಎಸ್‌ಪಿ (ಡಿಟೆಕ್ಟೀವ್) | | 2 | |
| 08 | ಪಿಐ (ಸಿವಿಲ್) | 64 | 28 | 09 |
| 09 | ಪಿಐ (ಡಿಟೆಕ್ಟೀವ್) | | 27 | |
| 10 | ಡಿಎಸ್‌ಐ | 70 | 2 | 41 |
| 11 | ಎಎಸ್‌ಐ (ಕೆ.ಎಫ್.ಸಿ-131) | | 27 | |
| 12 | ಪಿಎಸ್‌ಐ | 19 | 16 | 3 |
| 13 | ಆರ್‌ಎಸ್‌ಐ | 2 | 2 | 0 |
| 14 | ಎಆರ್‌ಎಸ್‌ಐ | 30 | 30 | 0 |
| 15 | ಎಎಸ್‌ಐ | 25 | 24 | 1 |
| 16 | ಸಿಹೆಚ್‌ಸಿ | 194 | 176 | 18 |
| 17 | ಸಿಪಿಸಿ | 42 | 28 | 14 |
| 18 | ಎಹೆಚ್‌ಸಿ | 160 | 113 | 47 |
| 19 | ಎಪಿಸಿ | 62 | 7 | 55 |
| **ಒಟ್ಟು** | | **743** | **538** | **206** |
| **ಲಿಪಿಕ ಸಿಬ್ಬಂದಿಗಳು** | | | | |
| 01 | ಉಪ ನಿರ್ದೇಶಕರು | 01 | 01 | 0 |
| 02 | ಆಡಳಿತಾಧಿಕಾರಿ | 01 | 0 | 01 |
| 03 | ಕಾನೂನು ಸಲಹೆಗಾರ | 04 | 04 | 0 |
| 04 | ಶಾಖಾಧೀಕ್ಷಕರು | 07 | 07 | 0 |
| 05 | ಹಿರಿಯ ಲೆಕ್ಕ ಪರಿಶೋಧಕರು | 01 | 0 | 01 |
| 06 | ಕಿರಿಯ ಲೆಕ್ಕ ಪರಿಶೋಧಕರು | 01 | 0 | 01 |
| 07 | ಪ್ರಥಮ ದರ್ಜೆ ಸಹಾಯಕರು | 23 | 22 | 1 |
| 08 | ದ್ವಿತೀಯ ದರ್ಜೆ ಸಹಾಯಕರು | 33 | 32 | 1 |
| 09 | ಹಿರಿಯ ಶೀಘ್ರಲಿಪಿಗಾರ | 01 | 01 | 0 |

| | | | | |
|---|---|---|---|---|
| 10 | ಶೀಘ್ರಲಿಪಿಗಾರ | 20 | 16 | 4 |
| 11 | ಹಿರಿಯ ದತ್ತಾಂಶ ನಮೂದಕರು/ ಬೆರಳಚ್ಚುಗಾರರು | 04 | 02 | 02 |
| 12 | ದತ್ತಾಂಶ ನಮೂದಕರು ಬೆರಳಚ್ಚುಗಾರರು | 01 | 0 | 01 |
| 13 | ದಲಾಯತ್ | 14 | 12 | 02 |
| 14 | ಜಾಡಮಾಲಿ | 09 | 09 | 0 |
| | **ಒಟ್ಟು** | **120** | **106** | **14** |
| | **ಒಟ್ಟು** | **863** | **644** | **220** |

- ➢ ಸಿ.ಐ.ಡಿ ಘಟಕದ ನಿಯೋಜನಾ ಹುದ್ದೆಗಳನ್ನು ಭರ್ತಿ ಮಾಡಲು ಪೊಲೀಸ್ ಆಯುಕ್ತರು, ಬೆಂಗಳೂರು ಘಟಕದಲ್ಲಿ ಸಿಬ್ಬಂದಿಗಳ ಕೊರತೆ ಇರುವುದರಿಂದ ತನಿಖಾ ಸಹಾಯಕರನ್ನು ಹಂತ ಹಂತವಾಗಿ ನಿಯೋಜಿಸಲಾಗುತ್ತಿದೆ. ಆಸಕ್ತ ಸಿಬ್ಬಂದಿಗಳು ನಿಯೋಜನೆಗೆ ರಾಜ್ಯದ ವಿವಿದೆಡೆಯಿಂದ ಅರ್ಜಿಯನ್ನು ಸಲ್ಲಿಸಿದಾಗ ಅರ್ಹ ಸಿಬ್ಬಂದಿಗಳನ್ನು ಸಿ.ಐ.ಡಿ ಘಟಕಕ್ಕೆ ನಿಯೋಜನೆ ಮೂಲಕವೂ ಸಹ ಭರ್ತಿ ಮಾಡಲಾಗುತ್ತಿದೆ.

- ➢ ಪ್ರಸ್ತುತ ತನಿಖೆಗಳ ಪ್ರಗತಿಗೆ ಸಹಾಯವಾಗಲು ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ಸಿ.ಐ.ಡಿ ಘಟಕದಲ್ಲಿ 30 ಎ.ಹೆಚ್.ಸಿ ಸಶಸ್ತ್ರ ವೃಂದದ ಹುದ್ದೆಗಳನ್ನು ಸಿ.ಹೆಚ್.ಸಿ ಸಿವಿಲ್ ವೃಂದದ ಹುದ್ದೆಗಳನ್ನಾಗಿ ಪರಿವರ್ತಿಸಿ ಮಂಜೂರಾತಿ ನೀಡುವ ಪ್ರಸ್ತಾವನೆ ಪರಿಶೀಲನೆ ಹಂತದಲ್ಲಿ ಇರುತ್ತದೆ.

- ➢ ಅಲ್ಲದೇ ಪ್ರಮುಖ ಪ್ರಕರಣಗಳಿಗೆ ಸರ್ಕಾರದ ಹಂತದಲ್ಲಿ ವಿಶೇಷ ತನಿಖಾ ತಂಡಗಳನ್ನು ರಚಿಸಲಾಗುತ್ತಿದ್ದು, ಈ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿಗೊಳಿಸಲು ಇತರೆ ಸಿಬ್ಬಂದಿಗಳನ್ನು ಹೆಚ್ಚುವರಿಯಾಗಿ ಪ್ರತ್ಯೇಕವಾಗಿ ತನಿಖಾ ತಂಡದ ಕಾರ್ಯಗಳಿಗೆ ನಿಯೋಜಿಸಲು ಕ್ರಮ ವಹಿಸಲಾಗುತ್ತಿದೆ.

**ಸಂಖ್ಯೆ: ಒಇ 438 ಪಿಇಜಿ 2025**

**(ಡಾ. ಜಿ. ಪರಮೇಶ್ವರ)**
ಗೃಹ ಸಚಿವರು